# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 162 Issue: 162 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 28.12.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2







# ಸಿಂಗ್ ಪಯಣ ಅರ್ಥಪೂರ್ಣ

## ಭಾರತ ಕಂಡ ಸೌಮ್ಯ ಪ್ರಾಮಾಣಿಕ ಪ್ರಧಾನಿ



### ಅವರ ಬದುಕು, ಆರ್ಥಿಕ ನೀತಿಗಳು ನಮ್ಮೆಗೆಲ್ಲ ಪ್ರೇರಣೆ

### ಕರ್ನಾಟಕದ ಆರ್ಥಿಕ ಸ್ಥಿತಿ ಉತ್ತಮವೆಂದು ಪ್ರಶಂಸಿಸಿದ್ದರು:ಸಿಎಂ



■ **ಹಂಪಿ ಟೈಮ್ಸ್ ಬೆಳಗಾವಿ**

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಬದುಕು, ಆರ್ಥಿಕ ನೀತಿಗಳು ನಮ್ಮೆಗೆಲ್ಲ ಪ್ರೇರಣೆ. ಶ್ರೇಷ್ಠ ಆರ್ಥಿಕ ತಜ್ಞರಾಗಿದ್ದ ಅವರು, 2013–18 ರವರೆಗೆ ಕರ್ನಾಟಕದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ಬಣ್ಣಿಸಿದ್ದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು.

ಅವರು ಬೆಳಗಾವಿಯಲ್ಲಿ ಮಾಧ್ಯಮದವರೊಂದಿಗೆ ಶುಕ್ರವಾರ ಮಾತನಾಡಿದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ನಿಧನಕ್ಕೆ ಸಂತಾಪ ಸೂಚಿಸಿದ ಮುಖ್ಯಮಂತ್ರಿಗಳು, ಈಗಿನ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಜನಿಸಿದ ಮನಮೋಹನ್ ಸಿಂಗ್ ರವರು ಜಗತ್ತಿನ ಖ್ಯಾತ ಅರ್ಥಶಾಸ್ತ್ರಜ್ಞರಾಗಿ ಬೆಳೆದವರು. ಪಿ.ವಿ. ನರಸಿಂಹರಾವ್ ಅವರ ಸಂಪುಟದಲ್ಲಿ ಆರ್ಥಿಕ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು. ಉದಾರೀಕರಣದ ಮೂಲಕ ಭಾರತವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಅವರ ಅಪಾರ ಜ್ಞಾನ ಹಾಗೂ ದೂರದೃಷ್ಟಿಯ ಯೋಜನೆಗಳು, ಭಾರತವು ಆರ್ಥಿಕ ಮುಗ್ಗಟ್ಟಿನಿಂದ ಹೊರಬರಲು ಕಾರಣವಾಯಿತು ಎಂದರು.

**ದೇಶದ ಆರ್ಥಿಕತೆಯಲ್ಲಿ ಮನಮೋಹನ್ ಸಿಂಗ್‌ರ ಹೆಜ್ಜೆಗುರುತು** : 2004 ರಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಸಾಧಿಸಿ, ಸೋನಿಯಾ ಗಾಂಧಿಯವರು ಪ್ರಧಾನಿಯಾಗಲು ನಿರಾಕರಿಸಿದ ಸಂದರ್ಭದಲ್ಲಿ ಮನಮೋಹನ್ ಸಿಂಗ್ ಅವರನ್ನು ಪ್ರಧಾನ ಮಂತ್ರಿಯಾಗಿ ಆಯ್ಕೆ ಮಾಡಲಾಗುತ್ತದೆ. >> 4



■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಸರ್ಕಾರ ಸಚಿವಾಲಯದ ಅಧಿಸೂಚನೆಯಂತೆ ಭಾರತದ ಮಾಜಿ ಪ್ರಧಾನಮಂತ್ರಿ ಡಾ.ಮನಮೋಹನ್‌ಸಿಂಗ್ ಅವರ ನಿಧನದ ಹಿನ್ನೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ದಿವಂಗತರ ಗೌರವಾರ್ಥವಾಗಿ ಶುಕ್ರವಾರ ವಿಶ್ವವಿದ್ಯಾಲಯಕ್ಕೆ ಸಾರ್ವಜನಿಕ ರಜೆ ಘೋಷಿಸಿ, ಕ್ರಿಯಾಶಕ್ತಿ ಕಟ್ಟಡದ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಂತಾಪ ಸೂಚಕ ಸಭೆಯಲ್ಲಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಹಾಗೂ ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಅವರು ಡಾ. ಮನಮೋಹನ್‌ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸಭೆಯಲ್ಲಿ ಅಧಿಕಾರಿಗಳು, ಪ್ರಾಧ್ಯಾಪಕರು, ಸಿಬ್ಬಂದಿಗಳು ಭಾಗವಹಿಸಿದ್ದರು.




## ಸ್ಟುಡೆಂಟ್ ಕಾಲಂ

# ಮನಸ್ಸಿದ್ದರೆ ಮಾರ್ಗ



ಒಂದು ಸುಂದರ ಕುಟುಂಬ. ಆ ಕುಟುಂಬದಲ್ಲಿ ತ್ರಿಶಾ ಎನ್ನುವ ಒಬ್ಬ ಹೆಣ್ಣು ಮಗಳಿದ್ದಳು. ಅವಳಿಗೆ ಕಬ್ಬಡ್ಡಿ ಎಂದರೆ ತುಂಬಾ ಇಷ್ಟ. ಅವಳು ಮೂರು ನಾಲ್ಕು ವರ್ಷ ಆಡಿದಳು. ತ್ರಿಶಾಳಿಗೆ ಅವರ ಶಿಕ್ಷಕರಾದ ಕಿರಣ ಪಾಟೀಲ ಸರ್ ಅವರು ಆಟದ ಕುರಿತು ತುಂಬಾ ತಿಳಿಸಿ ಧೈರ್ಯ ಹೇಳುತ್ತಿದ್ದರು. ತನ್ನ ಜೊತೆಯಲ್ಲಿದ್ದ ಗೆಳತಿಯರಿಗೆ ಮತ್ತು ತನಗಿಂತ ಚಿಕ್ಕವರಿಗೆ ಕಬ್ಬಡ್ಡಿ ಕುರಿತು ತನಗೆ ತಿಳಿದಷ್ಟು ಹೇಳಿ ಅವರನ್ನು ಕರೆದುಕೊಂಡು ಕಬ್ಬಡ್ಡಿ ಆಡುತ್ತಿದ್ದಳು. ತ್ರಿಶಾಳ ಆಟ ಪ್ರೇಕ್ಷಕರಿಗೆ ಎಷ್ಟು ಇಷ್ಟ ಆಗಿತ್ತು ಎಂದರೆ ತ್ರಿಶಾ ಕಬ್ಬಡ್ಡಿಯನ್ನು ಆಡುತ್ತಾಳೆ ಎಂದು ಕೇಳಿದ ತಕ್ಷಣವೇ ಎಲ್ಲರೂ ನೋಡಲು ಬರುತ್ತಿದ್ದರು. ಏಕೆಂದರೆ ಅವಳು ತುಂಬಾ ಚೆನ್ನಾಗಿ ಆಡುತ್ತಿದ್ದಳು. ತ್ರಿಶಾಳ ಆಟ ಎಲ್ಲರಿಗೂ ಖುಷಿ ಕೊಡುತ್ತಿತ್ತು.

ತ್ರಿಶಾ ಆಡಲು ಹಿಂಜರಿದಾಗ ಅವಳ ಗೆಳತಿಯರು ಧೈರ್ಯ ಹೇಳಿ ಸ್ಫೂರ್ತಿ ನೀಡುತ್ತಿದ್ದರು. ನಾಲ್ಕು ವರ್ಷದ ನಂತರ ಶಾಲೆಯಲ್ಲಿ ಬೀಳ್ಕೊಡುಗೆ ಸಮಾರಂಭ ನಡೆಯಿತು. ಆ ನಂತರ ತ್ರಿಶಾಳಿಗೆ ಕಬ್ಬಡ್ಡಿ ಆಟವನ್ನು ಮುಂದುವರಿಸಲು ತುಂಬಾ ಆಸೆಯಿತ್ತು. ಆದರೆ ಕೊರೋನಾ ಎಂಬ ಮಹಾಮಾರಿಯಿಂದ ಎರಡು ವರ್ಷ ಆಡಲು ಅವಕಾಶವೇ ಇಲ್ಲದಂತಾಯಿತು. ಎರಡು ವರ್ಷದ ನಂತರ ಮತ್ತೇ ಯಾವುದೇ ತರಬೇತಿಯನ್ನು ತೆಗೆದುಕೊಳ್ಳದೆ ಗುರುಗಳಾದ ಕಿರಣ ಸರ್ ಅವರ ಸ್ಫೂರ್ತಿಯ ಮಾತುಗಳು ಕಾರಣವಾಗಿದ್ದವು. ಆದ್ದರಿಂದ 'ಹಿಂದೆ ಗುರು, ಮುಂದೆ ಗುರಿ ಇರಬೇಕು' ಎನ್ನುವುದು ಇದಕ್ಕೆ ಅನಿಸುತ್ತದೆ.



ಕಬ್ಬಡ್ಡಿಯನ್ನು ಈಗಲೂ ನೋಡುತ್ತಿದ್ದರೆ ಆಡುವವರಿಗಿಂತ ನೋಡುವವರ ಹುಮ್ಮಸ್ಸು ಅಟ್ಟಕ್ಕೇರಿಸುತ್ತದೆ. ಅಷ್ಟೊಂದು ರೋಮಾಂಚನ ಅನ್ನಿಸುವ ಆಟ ಕಬ್ಬಡ್ಡಿ. ಇದಕ್ಕೆ ತ್ರಿಶಾಳಿಗೆ ಎಲ್ಲ ಆಟಕ್ಕಿಂತ ಕಬ್ಬಡ್ಡಿ ಇಷ್ಟವಾಗುತ್ತಿತ್ತು. ಕಬ್ಬಡ್ಡಿಯ ಬಟ್ಟೆಯನ್ನು ಧರಿಸಿದಾಗ ಸಿಕ್ಕಾಪಟ್ಟೆ ಖುಷಿಯಾಗುತ್ತದೆ. 'ಮನಸ್ಸಿದ್ದರೆ ಮಾರ್ಗ' ಎನ್ನುವ ಮಾತನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಗುರಿ ತಲುಪುವ ಮಾರ್ಗ ಸುಲಭವಾಗುತ್ತದೆ.

**– ಕೀರ್ತನಾ ಹಿರೇಮಠ. ದ್ವಿತೀಯ ಪಿಯುಸಿ. ಶ್ರೀ ಸಾಯಿ ಪದವಿ ಪೂರ್ವ ಮಹಾವಿದ್ಯಾಲಯ ಧಾರವಾಡ.**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
**ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ**
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಸಂಖ್ಯೆಗಳು ಇಲ್ಲದಿದ್ದರೆ...

ಶಶಾಂಕ ಹೊಂವರ್ಕ್‌ನ ಭಾಗವಾಗಿ ಮಗ್ಗಿ ಬರೆಯುವಾಗ ಸಂಖ್ಯೆಗಳನ್ನು ಬರೆದು ಬರೆದು ಸುಸ್ತಾಗಿದ್ದ. 'ಈ ಸಂಖ್ಯೆಗಳನ್ನು ಯಾಕಾದ್ರೂ ಕಂಡುಹಿಡಿದ್ರೋ' ಎಂದುಗೊಣಗಾಡಿದ. ಇವನ ಮಾತು ಕೇಳಿಸಿಕೊಂಡ ತಂದೆ 'ಏನೋ ಅದು ಗೊಣಗಾಡೋದು?'ಎಂದರು. "ಏನಿಲ್ಲ ಪಪ್ಪ ದಿನವೂ ಇದೇ ಸಂಖ್ಯೆಗಳನ್ನು ಬರೆದು ಬರೆದು ಸಾಕಾಗಿದೆ. ಸಂಖ್ಯೆಗಳು ಇರದಿದ್ದರೆ ಎಷ್ಟು ಚೆನ್ನಾಗಿರ್ತಿತ್ತು ನೋಡು" ಎನ್ನುತ್ತಾ ಮತ್ತೊಂದು ಪ್ರಶ್ನೆ ಹಾಕಿದ. "ಪಪ್ಪಾ, ಈ ಸಂಖ್ಯೆಗಳು ಇಲ್ಲದಿದ್ದರೆ ಏನಾಗುತ್ತಿತ್ತು?" ಎಂದನು. ಮಗನ ಮಾತಿಗೆ ತಂದೆ ಬೆಚ್ಚಿ ಬಿದ್ದರು. ಇದು ಕೇವಲ ಶಶಾಂಕನ ಪ್ರಶ್ನೆ ಮಾತ್ರವಲ್ಲ. ಸಂಖ್ಯೆಗಳು ಹಾಗೂ ಗಣಿತವನ್ನು ದ್ವೇಷಿಸುವ ಪ್ರತಿಯೊಬ್ಬರೂ ಹೀಗೇ ಹೇಳುತ್ತಾರೆ. ಆದರೆ ನಮ್ಮ ನಿತ್ಯ ಜೀವನದಲ್ಲಿ ಸಂಖ್ಯೆಗಳು ಹಾಗೂ ಗಣಿತದ ಪ್ರಾಮುಖ್ಯತೆ ನಿಜವಾಗಿಯೂ ಅವರಿಗೆ ತಿಳಿದಿಲ್ಲವೆಂಬುದನ್ನು ಗಮನಿಸಬಹುದು.

ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ವಿವಿಧ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿ ಸಂಖ್ಯೆಗಳನ್ನು ಬಳಸುತ್ತಲೇ ಇರುತ್ತೇವೆ. ಪ್ರತಿ ಘಟನೆಯಲ್ಲೂ ಸಂಖ್ಯೆಗಳು ಹಾಸುಹೊಕ್ಕಾಗಿವೆ. ಯಾವುದೇ ರೀತಿಯಿಂದ ಯೋಚಿಸಿದರೂ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಸಂಖ್ಯೆಗಳನ್ನು ಬಳಸುತ್ತಲೇ ಇದ್ದಾರೆ. ಇಂತಹ ಅಗಾಧ ಬಳಕೆಯುಳ್ಳ ಸಂಖ್ಯೆಗಳು ಇಲ್ಲದೇ ಹೋಗಿದ್ದರೆ ಏನಾಗುತ್ತಿತ್ತು? ಎಂಬ ಪ್ರಶ್ನೆ ಮೂಡದೇ ಇರದು.

ಸಂಖ್ಯೆಗಳು ಇಲ್ಲದೇ ಇದ್ದರೆ ನಮ್ಮ ಜೀವನದಲ್ಲಿ 'ಎಷ್ಟು' ಎಂಬ ಕಲ್ಪನೆಯೇ ಇರುತ್ತಿರಲಿಲ್ಲ. ಎಷ್ಟು ಎಂಬ ಕಲ್ಪನೆ ಮೂಡಿದಾಗಿನಿಂದ ಸಂಖ್ಯೆಗಳು ವ್ಯಕ್ತವಾಗುತ್ತಲೇ ಬಂದಿವೆ. ಸಂಖ್ಯೆಗಳೇ ಇಲ್ಲದಿದ್ದರೆ ನಾವು ಮಾರ್ಕೆಟ್‌ಗೆ ಹೋಗಿ ಸರಕು ಸಾಮಗ್ರಿಗಳನ್ನು ಖರೀದಿಸಲು ಸಾಧ್ಯವಾಗುತ್ತಲೇ ಇರಲಿಲ್ಲ. ಏಕೆಂದರೆ ಸಂಖ್ಯೆಗಳನ್ನು ಬಳಸದೇ ವಸ್ತುಗಳಿಗೆ ಬೆಲೆ ನೀಡಲು ಸಾಧ್ಯವಿಲ್ಲ ಅಲ್ಲವೇ?

ಸಂಖ್ಯೆಗಳನ್ನು ಬಳಸುವ ಹಾಗೂ ಕಲಿಯುವ ಮೂಲಕ ಮಕ್ಕಳೂ ಸೇರಿದಂತೆ ಎಲ್ಲಾ ವಯಸ್ಸಿನವರೂ ತಾರ್ಕಿಕ ಕೌಶಲ್ಯವನ್ನಾಗಲೀ, ಸಮಸ್ಯೆ ಪರಿಹಾರ ಸಾಮರ್ಥ್ಯವನ್ನಾಗಲೀ ಬೆಳೆಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಸಂಖ್ಯೆಗಳು ಇಲ್ಲದಿದ್ದರೆ ನಮ್ಮಲ್ಲಿ ಯೋಚನಾ ಲಹರಿಯೇ ಇರುತ್ತಿರಲಿಲ್ಲ. ಕೇವಲ ಪ್ರಾಣಿ ಪಕ್ಷಿಗಳಂತೆ ನಾವು ಬದುಕಬೇಕಾಗುತಿತ್ತು.

ಸಂಖ್ಯೆಗಳು ಇಲ್ಲದೇ ಇದ್ದರೆ ಇಡೀ ವಿಶ್ವವು ಈಗಿನಷ್ಟು ಅಭಿವೃದ್ಧಿಯತ್ತ ಸಾಗಲು ಸಾಧ್ಯವೇ ಇರಲಿಲ್ಲ. ಪ್ರತಿ ಸಂದರ್ಭದಲ್ಲೂ ನಾವು ಸಮಯದ ಜೊತೆಗೆ ವೇಗವಾಗಿ ಚಲಿಸುತ್ತಿದ್ದೇವೆ. ಈ ಚಲನೆಯನ್ನು ಗಮನಿಸಲು ನಮಗೆ ಸಂಖ್ಯೆಗಳು ಬೇಕೇ ಬೇಕು. ಸಂಖ್ಯೆಗಳು ಇರದಿದ್ದರೆ ನಮ್ಮಲ್ಲಿ ಯಾವುದೇ ರೀತಿಯ ಕಲಿಕೆ ಆಗಲು ಸಾಧ್ಯವೇ ಇರಲಿಲ್ಲ. ಸಂಖ್ಯೆಗಳು ಕೇವಲ ಗಣಿತ ವಿಷಯಕ್ಕೆ ಮಾತ್ರ ಸೀಮಿತವಾಗಿಲ್ಲ. ಪ್ರತಿ ವಿಷಯದ ಕಲಿಕೆಗೂ ಸಂಖ್ಯೆಗಳು ಬೇಕೇ ಬೇಕು. ಅದರಲ್ಲೂ ವಿಜ್ಞಾನ, ತಂತ್ರಜ್ಞಾನ, ವಾಸ್ತುಶಿಲ್ಪ, ವಾಣಿಜ್ಯೋದ್ಯಮಗಳಲ್ಲಿ ಸಂಖ್ಯೆಗಳು ಮಹತ್ವದ ಸ್ಥಾನ ಪಡೆದಿವೆ. ಪ್ರತೀ ವಿಷಯದ ಕಲಿಕೆಗೂ ಸಂಖ್ಯೆಗಳು ಅವಶ್ಯವಿರುವಂತೆ ಪ್ರತೀ ವೃತ್ತಿಗೂ ಸಂಖ್ಯೆಗಳು ಬೇಕು. ಸಂಖ್ಯೆಗಳನ್ನು ಬಳಸದೇ ಮಾಡುವ ಯಾವುದೇ ಕೆಲಸ ಈ ಜಗತ್ತಿನಲ್ಲಿ ಇಲ್ಲ. ಕೂಲಿ, ಗುಮಾಸ್ತನಿಂದ ಹಿಡಿದು ಸಾಫ್ಟ್‌ವೇರ್‌ನಂತಹ ಕೃತಕ ಬುದ್ಧಿವಂತಿಕೆ ಕೆಲಸಕ್ಕೂ ಸಹ ಸಂಖ್ಯೆಗಳು ಬೇಕೇ ಬೇಕು.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ
Scan For Digital Colourful
HAMPI TIMES E-paper



## ಏನಾಗುತ್ತೆ ಗುರು?

ಸಂಖ್ಯೆಗಳು ಇಲ್ಲದಿದ್ದರೆ ಜನ್ಮದಿನಾಂಕ, ಜನ್ಮಸಮಯಗಳು ಅಪ್ರಸ್ತುತ ಎನಿಸುತ್ತಿದ್ದವು. ದಿನ, ವಾರ, ತಿಂಗಳು, ವರ್ಷಗಳ ಲೆಕ್ಕಾಚಾರಕ್ಕೆ ಸಂಖ್ಯೆಗಳು ಬೇಕೇ ಬೇಕು. ಸಂಖ್ಯೆಗಳಿಲ್ಲದಿದ್ದರೆ, ವಿಜ್ಞಾನ ಆವಿಷ್ಕಾರಗಳು ನಡೆಯುತ್ತಲೇ ಇರಲಿಲ್ಲ. ಏಕೆಂದರೆ ಪ್ರತಿಯೊಂದು ಸಂಶೋಧನೆಯೂ ಗಣಿತದ ಸಂಖ್ಯಾ ಲೆಕ್ಕಾಚಾರದ ಆಧಾರದ ಮೇಲೆ ನಡೆಯುತ್ತದೆ. ಗಣಿತದ ಆಧಾರವಿಲ್ಲದ ಸಂಶೋಧನೆಯನ್ನು ಯಾರೂ ಒಪ್ಪಲು ಸಾಧ್ಯವಿಲ್ಲ.

ಸಂಖ್ಯೆಗಳು ಇಲ್ಲದಿದ್ದರೆ, ಅಡುಗೆ ಮಾಡಲು ಸಾಧ್ಯವಿರಲಿಲ್ಲ. ಆಹಾರ ತಿನ್ನಲು ಸಾಧ್ಯವಿರಲಿಲ್ಲ. ಮಾರುಕಟ್ಟೆಯಲ್ಲಿ ಯಾವುದೇ ವಸ್ತುಗಳನ್ನು ಕೊಳ್ಳಲು ಸಾಧ್ಯವೇ ಇರಲಿಲ್ಲ. ಏಕೆಂದರೆ ಮಾರುಕಟ್ಟೆಯ ಪ್ರತಿ ಸಂಗತಿಯೂ ಅಳತೆ ಮತ್ತು ತೂಕವನ್ನು ಅವಲಂಬಿಸಿದೆ. ತೂಕ ಮತ್ತು ಅಳತೆಗೆ ಸಂಖ್ಯೆಗಳು ಬೇಕೇ ಬೇಕು. ಸಂಖ್ಯೆಗಳಿಲ್ಲದಿದ್ದರೆ ಮನೆ ನಿರ್ಮಾಣ ಸಾಧ್ಯವಿರಲಿಲ್ಲ. ಮಾನವ ಸಂಘ ಜೀವಿಯಾಗಿರುವುದಕ್ಕೆ ಕಾರಣವೇ ಸಂಖ್ಯೆಗಳು ಎನ್ನಬಹುದು. ಎಣಿಕೆಇಲ್ಲದೇ ಹೋದರೆ ಎಷ್ಟು ಜನ ವಾಸವಾಗಿದ್ದೇವೆ ಎಂಬುದು ತಿಳಿಯುತ್ತಲೇ ಇರಲಿಲ್ಲ.

ಸಂಖ್ಯೆಗಳಿಲ್ಲದಿದ್ದರೆ ನಾವು ಒಂದುಕಡೆಯಿಂದ ಇನ್ನೊಂದು ಕಡೆಗೆ ಸಂಚರಿಸಲು ಸಾರಿಗೆ ವ್ಯವಸ್ಥೆ ಇರುತ್ತಿರಲಿಲ್ಲ. ಸಾರಿಗೆ ವ್ಯವಸ್ಥೆಯು ದೂರವನ್ನು ಅವಲಂಬಿಸಿದೆ. ದೂರದ ಅಳತೆ ಹಾಗೂ ಅದರ ವೆಚ್ಚದ ಲೆಕ್ಕಾಚಾರಕ್ಕೆ ಸಂಖ್ಯೆಗಳು ಅವಶ್ಯಕ. ಸಂಖ್ಯೆಗಳು ಇಲ್ಲದಿದ್ದರೆ ಕಟ್ಟಡಗಳು, ಸೇತುವೆಗಳನ್ನು ನಿರ್ಮಿಸಲು ಸಾಧ್ಯವೇ ಇರಲಿಲ್ಲ. ದೇವಸ್ಥಾನ, ಚರ್ಚು, ಮಸೀದಿ, ಬಸದಿ, ಇಗರ್ಜಿಗಳನ್ನು ಕಟ್ಟಲು ಆಗುತ್ತಲೇ ಇರಲಿಲ್ಲ. ಸಂಖ್ಯೆಗಳು ಹಾಗೂ ಗಣಿತದ ಲೆಕ್ಕಾಚಾರವಿಲ್ಲದ ಬದುಕು ಕಣ್ಣುಮುಚ್ಚಿಕೊಂಡು ಕಲಾ ವಸ್ತು ಸಂಗ್ರಹಾಲಯದಲ್ಲಿ ನಡೆದಂತಾಗುತ್ತದೆ. ಗಣಿತ ಇಡೀ ಜಗತ್ತಿನ ಸಾರ್ವತ್ರಿಕ ಭಾಷೆ. ಗಣಿತದ ಸಮೀಕರಣ ಬಳಸಿ ಒಬ್ಬ ವಿಜ್ಞಾನಿ ಬಳಸಿದ ತತ್ವವನ್ನು ಜಗತ್ತಿನ ಇನ್ನೊಂದು ಮೂಲೆಯ ಮತ್ತೊಬ್ಬ ವಿಜ್ಞಾನಿ ಅದನ್ನು ಅರ್ಥೈಸಿಕೊಳ್ಳಲು ಗಣಿತ ಹಾಗೂ ಸಂಖ್ಯೆಗಳು ಸಹಾಯ ಮಾಡುತ್ತವೆ. ಏಕೆಂದರೆ ಗಣಿತ ಏಕಸೂತ್ರೀಯ ತತ್ವವನ್ನು ಹೊಂದಿದೆ. 2+2=4 ಇದು ಜಗತ್ತಿನ ಎಲ್ಲಾ ಭಾಷೆಯಲ್ಲೂ ಒಂದೇ ರೀತಿಯಾಗಿ ಬಳಸಲ್ಪಡುತ್ತದೆ. ಹಾಗಾಗಿ ಗಣಿತ ಇಡೀ ಜಗತ್ತಿನ ಸಾರ್ವತ್ರಿಕ ಭಾಷೆ ಎಂದರೆ ತಪ್ಪಲ್ಲ.

ಸಂಖ್ಯೆಗಳು ಇರದಿದ್ದರೆ ನಾವು ಮೈಗೆ ಬಟ್ಟೆ ಹಾಕಿಕೊಳ್ಳಲು ಆಗುತ್ತಿರಲಿಲ್ಲ. ಸಂಖ್ಯೆ ಬಳಕೆ ಇಲ್ಲದೆ ಕೃಷಿ ಇಲ್ಲ, ಕೃಷಿ ಇಲ್ಲದೇ ಬಟ್ಟೆ ಇಲ್ಲ. ಸಂಖ್ಯೆ ಇಲ್ಲದಿದ್ದರೆ ಕಾಲಿಗೆ ಚಪ್ಪಲಿಯಾಗಲೀ, ಮುಖಕ್ಕೆ ಸೌಂದರ್ಯ ವರ್ಧಕಗಳನ್ನಾಗಲೀ ತಯಾರಿಸಲು ಆಗುತ್ತಲೇ ಇರಲಿಲ್ಲ.

ಸಂಖ್ಯೆಗಳು ಇರದಿದ್ದರೆ ಮೊಬೈಲ್ ಹಾಗೂ ಮೊಬೈಲ್ ಸಂಖ್ಯೆಯ ಅವಶ್ಯಕತೆಯೇ ಇರುತ್ತಿರಲಿಲ್ಲ. ಫೇಸ್ಬುಕ್, ವಾಟ್ಸಪ್, ಟ್ವಿಟರ್, ಇನ್ಸ್ಟಾಗ್ರಾಮ್‌ನಂತಹ ಸಾಮಾಜಿಕ ಜಾಲ ತಾಣಗಳು ಜನ್ಮ ತಳೆಯುತ್ತಲೇ ಇರಲಿಲ್ಲ. ಸಂಖ್ಯೆಗಳು ಇರದೇ ಇದ್ದರೆ ಜಗತ್ತಿನಲ್ಲಿ ಶ್ರೀಮಂತರು ಹಾಗೂ ಬಡವರು ಎಂಬ ಕಲ್ಪನೆಯೇ ಇರುತ್ತಿರಲಿಲ್ಲ. ಸಂಖ್ಯೆಗಳಿಲ್ಲದಿದ್ದರೆ ಉತ್ತೀರ್ಣ, ಅನುತ್ತೀರ್ಣದ ಪ್ರಸಂಗವೇ ಬರುತ್ತಿರಲಿಲ್ಲ. ಸಂಖ್ಯೆಗಳು ಇಲ್ಲದಿದ್ದರೆ ಬಹುಶಃ ಜಗತ್ತಿನಲ್ಲಿ ಯಾವುದೇ ಭಾಷೆ ಉಗಮವಾಗುತ್ತಿರಲಿಲ್ಲ.

# ಆತ-ಶಾಲೆ-ಹಾಗೂ-ಚಪ್ಪಲಿ

ಆ ಊರಿನ ಹಿರಿಯ ಪ್ರಾಥಮಿಕ ಶಾಲೆಗೆ ಸಂದರ್ಶನ ನೀಡಿದೆ..ಹಾಜರಿ ಪುಸ್ತಕದಲ್ಲಿ ಹೆಚ್.ಎಂ ಸಮೇತ ಎಲ್ಲರೂ ಹಾಜರಿದ್ದರು
ರಿಯಾಲಿಟಿ ಚೆಕ್ ನಲ್ಲಿ ಹೆಡ್ ಮಾಸ್ಟರ್ ಕಾಣಿಸಲಿಲ್ಲ
ಎಲ್ಲಿ ನಿಮ್ಮ ಎಚ್.ಎಂ? ಸಹ ಶಿಕ್ಷಕರನ್ನು ಕೇಳಿದೆ
"ಸಾರ್, ನಮ್ಮ ಹೆಚ್ ಎಂ ಈಗ ಹೊರಗ ಹೋದರು ನೀವು ಒಳಗ ಬಂದ್ರಿ.."
"ಎಲ್ಲಿಗೆ ಹೋದರು?"
"ಈಗ ಪ್ರೇಯರ್ ಅತ್ರಿ ಸರ್.ಯಾವ್ಯಾವ ಮಕ್ಕಳು ಸಾಲಿಗೆ ಬಂದಿಲ್ಲ ಅವರ ಹೆಸರು ಪಟ್ಟಿ ಮಾಡಿಕೊಂಡು ಊರಾಕ ಹೋಗ್ಯಾರ ಸಾಹೇಬ್ರೇ ಮಕ್ಕಳನ್ನ ಸಾಲಿಗೆ ಕರೀಲಕ್ಕ..." ಮುಖ್ಯಗುರು ನಂತರದ ಶಿಕ್ಷಕರು ಹೇಳಿದರು..

ಮುಖ್ಯಶಿಕ್ಷಕನೆಷ್ಟು ಒಳ್ಳೆಯವನು ,ಮಕ್ಕಳ ಬಗ್ಗೆ ಆತನಿಗೆ ಎಂಥಾ ಕಾಳಜಿ, ಇಂಥ ವ್ಯಕ್ತಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಕೊಡಲೇಬೇಕೆನ್ನಿಸಿತು ನನಗೆ..
"ಎಷ್ಟೊತ್ತಾಗಬಹುದು ಅವರು ಬರಲಿಕ್ಕೆ" ಕೇಳಿದೆ
"ಬಾಳ ಹೊತ್ತಾಕತೀ ಸಾಬ್ರ..ಊರು ದೊಡ್ಡದು ಸಾಬ್ರೇ.
ಹೋಗೋ ಅವಸರದಾಗ ಇಕಾ ನೋಡ್ರಿ ನಂ ಹೆಡ್ಮಾಸ್ಟರ್ ಚಪ್ಪಲಿ ಕೂಡ ಮರೆತುಬಿಟ್ಟುಬರೀಗಾಲಿಲೇ ಹೋಗ್ಯಾರ ಮಕ್ಕಳನ್ನ ಕರೀಲಿಕ್ಕೆ"
ಇಬ್ಬರು ಅಸಿಸ್ಟೆಂಟ್ ಗಳ ಪ್ರಾಮಾಣಿಕ ಉತ್ತರ ..



ಮಹಿಮ
ವಿಶ್ರಾಂತ ಉಪನಿರ್ದೇಶಕರು, ರಾಯಚೂರು
Scan For Digital Colourful
HAMPI TIMES E-paper

ಎಂತಹಾ ಡೆಡಿಕೇಟೆಡ್ ಹೆಡ್ಮಾಸ್ಟರ್ ಈ ಮನುಷ್ಯ ,ಆತನಿಗೆ ಕೈ ಮುಗಿಯಬೇಕೆನ್ನಿಸಿತು...
ಶಾಲೆಯಿಂದ ಹೊರಬರುವಾಗ ಹೆಡ್ಮಾಸ್ಟರ್ ಕೊಣೆಯ ಬಾಗಿಲಿನ ಬಳಿ ಇದ್ದ ಆ ಹೆಚ್ ಎಂ ರವರ ಚಪ್ಪಲಿ ಗಳನ್ನು ಒಮ್ಮೆ ನೋಡಿದೆ... ಎಚ್ ಎಂ ಬಗ್ಗೆ ಪಾಪ ಅನಿಸಿತು...
ಮತ್ತೊಂದು ಬಾರಿ ಆ ಕಡೆ ಹೋದಾಗ ಅದೇ ಉತ್ತರ ಅವೇ ಚಪ್ಪಲಿ..
"ಮರೆತು ಹೋಗ್ತಾರ ರೀ ಸಾಹೇಬ್ರಾ ನಂ ಎಚ್.ಎಂ ಹುಡುಗರ್ನಾ ಕರೀಲಿಕ್ಕ ಹೋಗ್ಯಾರ.. ಬೇಕಾದ್ರೆ ಚಪ್ಲಿ ನೋಡ್ರೀ ಸಾರ್,ಮರೆತು ಹೋಗ್ಯಾರ"ನಂ 2 ಶಿಕ್ಷಕನ ಸಮಜಾಯಿಷಿ ಹಾಗೂ ಸಮರ್ಥನೆ..
ಚಪ್ಪಲಿಗಳನ್ನೊಮ್ಮೆ ದಿಟ್ಟಿಸಿ ನೋಡಿ ವಾಪಸ್ ಬಂದೆ.ನನ್ನ ಆರನೆಯ ಇಂದ್ರಿಯ ಚುರುಕಾಯಿತು..ಅದು ನನ್ನನ್ನು ಸುಮ್ಮನಿರಲು ಬಿಡಲಿಲ್ಲ..
ನಿಧಾನವಾಗಿ ಮೂಲಗಳಿಗೆ ಕೈ ಹಾಕಿದೆ...ವಿಷಯ ಸಿಕ್ಕಿತು. ವಿಷಯ ತಿಳಿದ ನಾನು ದಿಗ್ಭ್ರಾಂತನಾಗಿ ಹೋದೆ..
ಆ ಹೆಡ್ಮಾಸ್ಟರ್ ಚಿತ್ರದುರ್ಗ ದಿಂದ ಆ ಊರಿಗೆ ಡ್ಯೂಟಿಗೆ ಬರುತ್ತಿದ್ದರು..
ಅವರು ಬಹಳ ಜಾಣರು,ಶಾಲೆಯಲ್ಲಿ ಒಂದು ಜೊತೆ ಚಪ್ಪಲಿಯನ್ನು ಇಟ್ಟಿರುತ್ತಿದ್ದರು.. ಅಟೆಂಡೆನ್ಸ್ ಸಹಿ ಮಾಡಿ ಶಾಲೆಯಲ್ಲಿ ಖಾಯಂ ಆಗಿ ಇಟ್ಟಿರುವ ಚಪ್ಪಲಿಗಳನ್ನು ಶಾಲೆಯ ಹೊರಗೆ ಬಿಟ್ಟು ದುರ್ಗಕ್ಕೆ ಹೋಗಿಬಿಡುತ್ತಿದ್ದರು..
ಒಮ್ಮೊಮ್ಮೆ ಶಾಲೆಗೆ ಆ ವ್ಯಕ್ತಿ ಬರುತ್ತಲೂ ಇರಲಿಲ್ಲ..ಯಾರಾದರೂ ವಿಜಿಟ್ ಗೆ ಹೋಗಿ ಎಚ್ ಎಂ ಎಲ್ಲಿ??? ಅಂದಾಗ
"ಸರ್,ಇಲ್ಲೇ ಸರ್ ಇದಾರ.ಊರಾಗ ಮಕ್ಕಳನ್ನು ಕರೀಲಿಕ್ಕ ಹ್ವಾಗ್ಯಾರಾ...ಬೇಕಿದ್ರೆ ಇಕಾ ಚಪ್ಲಿ ಇಲ್ಲೇ ಅದಾವ ನೋಡ್ರೀ"ಎಂದು ಅವರ ಚಪ್ಪಲಿಗಳನ್ನು ತೋರಿಸುತ್ತಿದ್ದರು..
ಆತನಲ್ಲದೆಯೇ ಆತನ ಸಹ ಶಿಕ್ಷಕರು ಸಹ ನಮಗೆ ಯಾಮಾರಿಸುತ್ತಿದ್ದರು...
ವಿಷಯ ತಿಳಿದ ನಾನು ಹೌಹಾರಿ ಕ್ಷಣ ಕಾಲ ಕಳೆದುಹೋಗಿಬಿಟ್ಟೆ...
ಆತ ನಿವೃತ್ತನಾಗಿಹೋದ....ಅದೇ ನಮ್ಮ ಭಾಗ್ಯ..



ಪಾದುಕೆಗಳು ರಾಮಾಯಣದಿಂದಲೂ ಸುದ್ದಿ ಸದ್ದು ಮಾಡುತ್ತಲೇ ಇವೆಯಲ್ಲವೇ.? ಆದರೆ ಇದು ಬೇರೆ ವರ್ಷನ್..
ಆ ಕಾಮ್ ಚೋರ್‌ನನ್ನು ಮರೆಯಯಲಾದಿತೇ ????

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸಾಹಿತ್ಯದ ಗುಡಿ

ಕನ್ನಡವೆಂಬ ಕನ್ನಡಿ
ಮನಸ್ಸಿನ ಭಾವನೆಯ ಮುನ್ನುಡಿ
ಮಗುವಿನಿಂದ ಹೊರಟ ತೊದಲು ನುಡಿ
ಕನ್ನಡಾಂಬೆಗದು ಸಾಹಿತ್ಯದ ಗುಡಿ

ಬಳಪದಕಲ್ಲಿನ ಅಕ್ಷರಗಳು
ಮಂಟಪದ ಸಾಲು ಕಂಬಗಳು,
ಸ್ವರಗಳೇ ಹಾದಿ ಮೆಟ್ಟಿಲು
ವ್ಯಂಜನಗಳೇ ಭದ್ರ ತಳಹದಿ.

ಅನುಸ್ವಾರ ವಿಸರ್ಗಗಳೇ ಹೆಬ್ಬಾಗಿಲು
ಅಲ್ಪಮಹಾಪ್ರಾಣಗಳೇ ತೂಗು ಗಂಟೆಗಳು.
ಕಾಗುಣಿತಾಕ್ಷರಗಳ ಮಹಾ ಪ್ರಾಂಗಣ
ಒತ್ತಕ್ಷರಗಳ ಸಂಯೋಜನೆಯೊಂದು
ವಾಹನ ಮಂಟಪ.

ಪದ ವಾಕ್ಯಗಳೇ ದೇವಿಯ ಪಾದಪೀಠ
ವಿಭಕ್ತಿ ಪ್ರತ್ಯಯಗಳೆಂಬ ದ್ವಾರತೋರಣವು
ವಿಗ್ರಹವಾಕ್ಯದ ಸುಂದರಮೂರ್ತಿ
ಕ್ರಿಯಾಧಾತುಗಳೆಂಬ ಪ್ರಭಾವಳಿ.

ವೃತ್ತಾಕಾರದ ನವರಂಗ
ಷಟ್ಪದಿ ರಗಳೆಗಳ ಬಲಿಪೀಠ
ವಚನ ಗಳಿಂದ ಕೂಡಿದ ಅಧಿಷ್ಠಾನ
ಅರ್ಥ ರೂಪಗಳೆಂಬ ಅಂತರಾಳ.

ವ್ಯಾಕರಣವೆಂಬ ಪ್ರದಕ್ಷಿಣೆಯ ಪ್ರಾಕಾರವು
ಸಂಧಿ ಸಮಾಸದ ಗೋಡೆಗಳ
ಜೋಡಣೆಯು
ಛಂದಾಲಂಕಾರದ ದಿವ್ಯ ಗೋಪುರವು
ಕಾವ್ಯಾಲಂಕೃತ ಶಿಲ್ಪ ಕುಸರಿ ಕೆತ್ತನೆಯು.

ಮೇರುಕೃತಿಗಳೇ ನಿನ್ನ ಹೊನ್ನ ಕಳಸ
ಹಳೆಗನ್ನಡ ಲಿಪಿಗಳೇ ಶಿಲಾ ಶಾಸನವು
ದಿವ್ಯ ಪ್ರಬಂಧವೆಂಬ ಪುಷ್ಕರಣಿ
ಜಾನಪದ ಜಲದ ಅಭಿಷೇಕವು.

ಕನ್ನಡದ ಕವಿಗಳಿಂದ ಮೊಳಗಿದೆ
ಮಂತ್ರಘೋಷ
ಕರುನಾಡ ಬೀದಿಗಳಲ್ಲಿ ನಡೆಯುತಿದೆ
ರಥೋತ್ಸವ
ಕಲಾಭಿಮಾನಿಗಳಿಗೆ ಇದೇ ಜಾತ್ರಾ ಉತ್ಸವ
ಸಾಹಿತ್ಯದ ಕನ್ನಡಿಯಲಿ ಜರುಗಲಿ ನಮ್ಮ
ರಾಜ್ಯೋತ್ಸವ.

– **ಪ್ರೊ.ಮಧ್ವರಾಜ್ ಕೊಲ್ಹಾಪುರ್**, ಹೊಸಪೇಟೆ.

# ನಿರಂತರ ಪ್ರಯತ್ನ ಯಶಸ್ಸಿಗೆ ಮಾರ್ಗ

ಜ್ಞಾನಕ್ಕಿಂತ ಕಲ್ಪನಾ ಶಕ್ತಿಯು ತುಂಬಾ ಮಹತ್ವದ್ದಾಗಿದೆ. ಏಕೆಂದರೆ ಜ್ಞಾನಕ್ಕೆ ಮಿತಿ ಎಂಬುದಿದೆ ಆದರೆ ಕಲ್ಪನೆಗೆ ಯಾವುದೇ ಮಿತಿಗಳೂ ಇಲ್ಲ. ಮನುಷ್ಯನು ಜಗತ್ತಿನಲ್ಲಿ ಇಂದು ಅಸಾಧ್ಯವಾದ ಸಂಗತಿಗಳನ್ನು ಸಾಧ್ಯವಾಗಿಸಿದ್ದಾನೆಂದರೆ ಅದಕ್ಕೆ ಕಾರಣ ಅವನಲ್ಲಿರುವ ಅಪಾರ ಕಲ್ಪನಾ ಶಕ್ತಿ ಎಂದು ಹೇಳಬಹುದು. ಮನುಷ್ಯರಾದ ನಾವು ಯಾವಾಗಲೂ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವ ನೈಸರ್ಗಿಕ ಘಟನೆಗಳ ಬಗ್ಗೆ ಕುತೂಹಲವನ್ನು ಹೊಂದಿರುತ್ತೇವೆ. ಕುತೂಹಲವು ನಮ್ಮನ್ನು ಆ ಘಟನೆಗಳ ಕುರಿತು ಕಲ್ಪನೆಯನ್ನುಂಟು ಮಾಡಲು ಹಚ್ಚುತ್ತದೆ. ಈ ಕಲ್ಪನೆಗಳನ್ನು ಕಾರ್ಯಗತಗೊಳಿಸಲು ನಮಗೆ ಸಹಾಯಕ ವಾಗುವುದೇ ಪ್ರಯತ್ನ ಮತ್ತು ಪ್ರಮಾದಗಳು. ನಿರಂತರವಾಗಿ ಪ್ರಯತ್ನಗಳನ್ನು ಮಾಡುತ್ತಾ ಪ್ರಮಾದಗಳಿಗೆ ಪರಿಹಾರಗಳನ್ನು ಹುಡುಕುತ್ತಾ ಮುಂದೆ ಸಾಗುವುದರಿಂದ ಕಲ್ಪನೆಗಳಿಂದ ಒಂದು ತೀರ್ಮಾನಕ್ಕೆ ಬರುತ್ತೇವೆ ಅದುವೇ ವೈಜ್ಞಾನಿಕ ಅನ್ವೇಷಣೆಯಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಪ್ರಯತ್ನ–ಪ್ರಮಾದಗಳನ್ನು ಮಾಡದೇ ಏನಾದರೊಂದು ಸಮಸ್ಯೆಯನ್ನು ಅವರ ಮುಂದಿಟ್ಟಾಗ ತಕ್ಷಣ ಅವರು ಗೂಗಲ್ ಮೊರೆ ಹೋಗುತ್ತಿರುವುದನ್ನು ಗಮನಿಸುತ್ತಿದ್ದೇವೆ. ತಂತ್ರಜ್ಞಾನದ ಮೇಲಿನ ತೀವ್ರವಾದ ಅವಲಂಬನೆಯಿಂದ ಸ್ವಂತವಾಗಿ ಕಲಿಯಲು ಅಗತ್ಯವಿರುವ ಕೌಶಲ್ಯ ಮತ್ತು ಜ್ಞಾನವನ್ನು ಕಳೆದುಕೊಳ್ಳುತ್ತಿದ್ದಾರೆ. ಮನುಷ್ಯ ಯಾವಾಗಲೂ ತನ್ನ ಸ್ವಂತ ಅನುಭವ ಹಾಗೂ ಪ್ರಮಾದಗಳಿಂದ ಕಲಿಯುತ್ತಾ ಸಾಗುತ್ತಾನೆ. ಸೃಜನಾತ್ಮಕ ಪ್ರಕ್ರಿಯೆಯಲ್ಲಿ ನಿಜವಾದ ನವೀನ ಕಲ್ಪನೆಗಳನ್ನು ಉತ್ಪಾದಿಸಲು ಪ್ರಯತ್ನ ಮತ್ತು ಪ್ರಮಾದವು ಸಾಮಾನ್ಯವಾಗಿ ಅತ್ಯಗತ್ಯವಾಗಿರುತ್ತದೆ. ಯಾವುದೇ ಒಂದು ಪ್ರಯೋಗದಲ್ಲಿನ ಪ್ರಮಾದವು ಅವನನ್ನು ಇನ್ನೂ ಹೆಚ್ಚಿನ ವಿಶ್ಲೇಷಣೆಗೆ ಹಚ್ಚುತ್ತದೆ. ಪ್ರಯತ್ನ ಮತ್ತು ಪ್ರಮಾದವು ವೈಜ್ಞಾನಿಕ ವಿಧಾನದ ಮೂಲಭೂತ ಅಂಶವಾಗಿದೆ ಮತ್ತು ಇದನ್ನು ವಿವಿಧ ವೈಜ್ಞಾನಿಕ ಪ್ರಯೋಗಗಳು ಮತ್ತು ತನಿಖೆಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಸಮಸ್ಯೆ ಅಥವಾ ಪ್ರಶ್ನೆಗೆ ಉತ್ತಮ ಅಥವಾ ಹೆಚ್ಚು ಪರಿಣಾಮಕಾರಿ ಪರಿಹಾರವನ್ನು ಕಂಡುಕೊಳ್ಳಲು ವಿವಿಧ ವಿಧಾನಗಳು ಅಥವಾ ವಿಧಾನಗಳನ್ನು ಪದೇ ಪದೇ ಪ್ರಯತ್ನಿಸುವುದನ್ನು ಇದು ಒಳಗೊಂಡಿರುತ್ತದೆ.



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

Scan For Digital Colourful
HAMPI TIMES E-paper

ವೈಜ್ಞಾನಿಕ ಸಂಶೋಧನೆಯಲ್ಲಿ ವಿಜ್ಞಾನಿಗಳು ಊಹೆಗಳು ಮತ್ತು ಸಿದ್ಧಾಂತಗಳನ್ನು ಪರೀಕ್ಷಿಸಲು ಅನುವು ಮಾಡಿಕೊಡುತ್ತದೆ. ಅವರು ಆರಂಭಿಕ ಕಲ್ಪನೆ ಅಥವಾ ಊಹೆಯೊಂದಿಗೆ ಪ್ರಾರಂಭಿಸಬಹುದು, ಪ್ರಯೋಗವನ್ನು ವಿನ್ಯಾಸ ಗೊಳಿಸಿ ನಂತರ ಪರೀಕ್ಷೆಗಳ




ಫಲಿತಾಂಶಗಳನ್ನು ಗಮನಿಸಿ ಮತ್ತು ದಾಖಲಿಸುತ್ತಾರೆ. ಆರಂಭಿಕ ಪ್ರಯೋಗದ ಫಲಿತಾಂಶಗಳು ನಿರೀಕ್ಷಿತ ಫಲಿತಾಂಶದೊಂದಿಗೆ ಹೊಂದಿಕೆಯಾಗದಿದ್ದರೆ, ಪ್ರಯೋಗದ ವಿನ್ಯಾಸವನ್ನು ಮಾರ್ಪಡಿಸಿ ಮತ್ತು ಮತ್ತೆ ಪ್ರಯತ್ನವನ್ನು ಮುಂದುವರೆಸುತ್ತಾರೆ. ಯಶಸ್ವಿ ಫಲಿತಾಂಶವನ್ನು ಸಾಧಿಸುವವರೆಗೂ ಈ ಪ್ರಯತ್ನ ಮತ್ತು ಪ್ರಮಾದ ಪ್ರಕ್ರಿಯೆಯನ್ನು ಹಲವಾರು ಬಾರಿ ಪುನರಾವರ್ತಿಸಬಹುದು. ಈ ವಿಧಾನವು ವಿಜ್ಞಾನಿಗಳು ಕಾರಣ ಮತ್ತು ಪರಿಣಾಮದ ಸಂಬಂಧಗಳನ್ನು ಅರ್ಥಮಾಡಿ ಕೊಳ್ಳಲು, ಮಾದರಿಗಳನ್ನು ಗುರುತಿಸಲು ಮತ್ತು ನೈಸರ್ಗಿಕ ಪ್ರಪಂಚದ ಬಗ್ಗೆ ಅವರ ತಿಳುವಳಿಕೆಯನ್ನು ಪರಿಷ್ಕರಿಸಲು ಸಹಾಯ ಮಾಡುತ್ತದೆ. ಒಟ್ಟಾರೆಯಾಗಿ, ವಿಭಿನ್ನ ಸಾಧ್ಯತೆಗಳನ್ನು ವ್ಯವಸ್ಥಿತವಾಗಿ ಪರೀಕ್ಷಿಸುವ ಮೂಲಕ ಮತ್ತು ನೈಸರ್ಗಿಕ ಪ್ರಪಂಚದ ಬಗ್ಗೆ ತಿಳುವಳಿಕೆಯನ್ನು ಪರಿಷ್ಕರಿಸುವ ಮೂಲಕ ಹೊಸ ಜ್ಞಾನವನ್ನು ಅನ್ವೇಷಿಸಲು ವಿಜ್ಞಾನಿಗಳಿಗೆ ಪ್ರಯತ್ನ ಮತ್ತು ಪ್ರಮಾದವು ನಿರ್ಣಾಯಕ ಸಾಧನವಾಗಿದೆ. ಯಾವುದು ಕೆಲಸ ಮಾಡುತ್ತದೆ ಮತ್ತು ಯಾವುದು ಮಾಡುವುದಿಲ್ಲ? ಎಂಬುದನ್ನು ನಿರ್ಧರಿಸಲು ವಿಭಿನ್ನ ಊಹೆಗಳು ಅಥವಾ ಪ್ರಾಯೋಗಿಕ ಪರಿಸ್ಥಿತಿಗಳನ್ನು ವ್ಯವಸ್ಥಿತವಾಗಿ ಪರೀಕ್ಷಿಸುವುದನ್ನು ಇದು ಒಳಗೊಂಡಿರುತ್ತದೆ. ವಿಭಿನ್ನ ವಿಧಾನಗಳನ್ನು ಪ್ರಯತ್ನಿಸುವ, ಫಲಿತಾಂಶಗಳನ್ನು ವಿಶ್ಲೇಷಿಸುವ ಮತ್ತು ಊಹೆಗಳನ್ನು ಮಾರ್ಪಡಿಸುವ ಈ ಪುನರಾವರ್ತಿತ ಪ್ರಕ್ರಿಯೆಯು ವಿಜ್ಞಾನದಲ್ಲಿ ಪ್ರಯತ್ನ ಮತ್ತು ಪ್ರಮಾದದ ಕೇಂದ್ರವಾಗಿದೆ. ಪ್ರಯತ್ನ ಮತ್ತು ಪ್ರಮಾದದ ಪ್ರಯೋಜನವೆಂದರೆ ವಿಜ್ಞಾನಿಗಳು ವ್ಯಾಪಕವಾದ ಸಾಧ್ಯತೆಗಳನ್ನು ಅನ್ವೇಷಿಸಲು ಮತ್ತು ಕ್ರಮೇಣ ಹೆಚ್ಚು ಪರಿಣಾಮಕಾರಿ ಅಥವಾ ನಿಖರವಾದ ಊಹೆಗಳನ್ನು ಕಿರಿದಾಗಿಸಲು ಅನುವು ಮಾಡಿಕೊಡುತ್ತದೆ. ಪ್ರಾಯೋಗಿಕ ವಿನ್ಯಾಸದಲ್ಲಿ ಸಂಭಾವ್ಯ ಪ್ರಮಾದಗಳು ಅಥವಾ ಗೊಂದಲದ ಅಂಶಗಳನ್ನು ಗುರುತಿಸುವಲ್ಲಿ ಇದು ಸಹಾಯ ಮಾಡುತ್ತದೆ ಮತ್ತು ಕಾಲಾನಂತರದಲ್ಲಿ ತಮ್ಮ ವಿಧಾನಗಳನ್ನು ಸುಧಾರಿಸಲು ವಿಜ್ಞಾನಿಗಳನ್ನು ಸಕ್ರಿಯಗೊಳಿಸುತ್ತದೆ.

ಪ್ರಯತ್ನ ಮತ್ತು ಪ್ರಮಾದಗಳಿಂದ ಕಲಿಯುವ ರೀತಿ – ಥಾರ್ನ್‌ಡೈಕ್ ಪ್ರಯೋಗ; ಥಾರ್ನ್‌ಡೈಕ್ ಎಂಬ ಮನೋವಿಜ್ಞಾನಿ ಹಸಿದ ಬೆಕ್ಕೊಂದನ್ನು ಪಂಜರದಲ್ಲಿಟ್ಟನು. ಪಂಜರದ ಬಾಗಿಲಿನಿಂದ ಒಂದು ಬೆಣೆಯನ್ನು ತಿರುಗಿಸುವುದರಿಂದ ಆ ಪಂಜರದ ಬಾಗಿಲು ತೆರೆಯುತ್ತಿತ್ತು. ಪಂಜರದ ಹೊರಗೆ ಬಾಗಿಲ ಹತ್ತಿರ ಆಹಾರವನ್ನು ಇಡಲಾಗಿತ್ತು. ಬೆಕ್ಕು ಬಾಗಿಲು ತೆರೆದು ಆಹಾರ ಪಡೆಯಲು ಬಹಳ ಪ್ರಯತ್ನಿಸಿತು. ಏನೂ ಮಾಡಿದರೂ ಪಂಜರದ ಬಾಗಿಲು ತೆರೆಯಲಿಲ್ಲ. ಅದು ತನ್ನ ಪ್ರಯತ್ನವನ್ನು ಮುಂದುವರೆಸಿತು. ಹೀಗೆ ಪ್ರಯತ್ನಿಸುತ್ತಿರುವಾಗ ಆಕಸ್ಮಾತ್ತಾಗಿ ಅದರ ಕಾಲು ಬಾಗಿಲ ಹತ್ತಿರವಿದ್ದ ಬೆಣೆಗೆ ತಗುಲಿ ಬಾಗಿಲು ತೆರೆಯಿತು. ಕೂಡಲೇ ಬೆಕ್ಕು ಹೊರ ಬಂದು ಆಹಾರವನ್ನು ಪಡೆಯಿತು. ಈ ಪ್ರಯೋಗವನ್ನು ಅದೇ ಬೆಕ್ಕಿನ ಮೇಲೆ ಪುನಃ ಪುನಃ ಮಾಡಿದಾಗ ಮುಂದಿನ ಪ್ರಯೋಗಗಳಲ್ಲಿ ಆ ಬೆಕ್ಕು ಬಾಗಿಲನ್ನು ತೆಗೆಯಲು ಕಡಿಮೆ ತಪ್ಪುಗಳನ್ನು ಮಾಡಿತು ಮತ್ತು ಕೊನೆಯದಾಗಿ ಬೆಕ್ಕು ತಪ್ಪಿಲ್ಲದೇ ಬೆಣೆಯನ್ನು ತೆಗೆದು ಬಾಗಿಲು ತೆರೆಯುವುದನ್ನು ಕಲಿತಿತು. ಮರಳಿ ಯತ್ನವ ಮಾಡು ಎಂಬ ಉಕ್ತಿಯಂತೆ ಈ ರೀತಿಯ ಕಲಿಕೆಯಿಂದ ಅನೇಕ ಮಹತ್ಕಾರ್ಯಗಳು ಸಾಧಿಸಲ್ಪಟ್ಟಿವೆ. ಅನೇಕ ವೈಜ್ಞಾನಿಕ ಸಂಶೋಧನೆಗಳು ಕೂಡ ಮಾಡಲ್ಪಟ್ಟಿವೆ. ಇದರಲ್ಲಿ ಒಬ್ಬ ನಿರ್ದಿಷ್ಟ ಗುರಿಯನ್ನು ಸಾಧಿಸಲು ವಿಭಿನ್ನ ಕ್ರಮಗಳು ಅಥವಾ ತಂತ್ರಗಳನ್ನು ಪ್ರಯತ್ನಿಸುವ ಮೂಲಕ ಕಲಿಯುತ್ತಾನೆ. ಇದು ವಿಭಿನ್ನ ಆಯ್ಕೆಗಳನ್ನು ಪ್ರಯತ್ನಿಸುವುದನ್ನು ಒಳಗೊಂಡಿರುತ್ತದೆ ಮತ್ತು ಅಂತಿಮವಾಗಿ ಸರಿಯಾದ ಉತ್ತರ ಅಥವಾ ಪರಿಹಾರವನ್ನು ಕಂಡುಹಿಡಿಯಲು ತಪ್ಪುಗಳನ್ನು ಮಾಡುತ್ತದೆ. ಒಂದು ಕ್ರಿಯೆ ಅಥವಾ ತಂತ್ರವು ಯಶಸ್ವಿಯಾಗದಿದ್ದರೆ, ಅದನ್ನು ಕೈಬಿಡಲಾಗುತ್ತದೆ ಮತ್ತು ಹೊಸದನ್ನು ಪ್ರಯತ್ನಿಸಲಾಗುತ್ತದೆ. ಈ ಪುನರಾವರ್ತನೆಯ ವಿಧಾನವು ಕ್ರಮೇಣ ಜ್ಞಾನ ಮತ್ತು ಅನುಭವವನ್ನು ಹೆಚ್ಚಿಸುತ್ತದೆ ಮತ್ತು ಯಶಸ್ಸಿನ ಪ್ರಮಾಣವನ್ನು ಹೆಚ್ಚಿಸುತ್ತದೆ.

ಪ್ರಯತ್ನ ಮತ್ತು ಪ್ರಮಾದದಿಂದ ಕಲಿಯುವ ತತ್ವದ ಹಿಂದೆ ಸರಳವಾದ ಮೂಲಭೂತ ಕಲ್ಪನೆ ಇದೆ: ಮಾನವರು ಮತ್ತು ಪ್ರಾಣಿಗಳು ಅನುಭವದಿಂದ ಕಲಿಯುತ್ತಾರೆ. ಕೇವಲ ನಡೆಯಲು ಕಲಿಯುತ್ತಿರುವ ಮಕ್ಕಳಿಂದ ಈ ತತ್ವವನ್ನು ಚೆನ್ನಾಗಿ ವಿವರಿಸಬಹುದು. ನಡೆಯಲು ಕಲಿಯಲು ಪ್ರಯತ್ನಿಸುವ ಮಕ್ಕಳು ಎಂದಿಗೂ ಪ್ರಯತ್ನಿಸಲು ಆಯಾಸಗೊಳ್ಳುವುದಿಲ್ಲ, ಕೆಳಗೆ ಬೀಳುತ್ತಾರೆ, ಮತ್ತೆ ಎದ್ದು ಮತ್ತೆ ನಡೆಯುವುದನ್ನು ಮುಂದುವರೆಸುತ್ತಾರೆ. ಪ್ರತಿ ಹೊಸ ಪ್ರಯತ್ನದೊಂದಿಗೆ (ಪ್ರಯೋಗ), ನಾವು ಏನು ಕೆಲಸ ಮಾಡಬಹುದೆಂದು ಪ್ರಯತ್ನಿಸುತ್ತೇವೆ. ಅದು ಕೆಲಸ ಮಾಡದಿದ್ದರೆ, ಅದನ್ನು ಪ್ರಮಾದವಾಗಿ ಸಂಗ್ರಹಿಸಲಾಗುತ್ತದೆ ಮತ್ತು ತಿರಸ್ಕರಿಸಲಾಗುತ್ತದೆ. ಈ ವಿಧಾನವು ನಿಧಾನವಾಗಿ ಏರುತ್ತಾ ಸಾಗುವ ಕಲಿಕೆಯ ರೇಖೆಯಂತಿದ್ದು ಅದು ಅಂತಿಮವಾದ ನಿರೀಕ್ಷಿತ ಗುರಿಗೆ ಕಾರಣವಾಗುತ್ತದೆ. ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಹೊಸ ಕೌಶಲ್ಯಗಳನ್ನು ಕಲಿಯಲು ಇದು ಪರಿಣಾಮಕಾರಿ ವಿಧಾನವಾಗಿದೆ. ಒಟ್ಟಾರೆಯಾಗಿ ನಿರಂತರವಾದ ಪ್ರಯತ್ನಗಳು, ಪ್ರಮಾದಗಳನ್ನು ಕಡಿಮೆಗೊಳಿಸುವ ಮೂಲಕ ಕಲಿಕೆಯನ್ನು ಗಟ್ಟಿಗೊಳಿಸುತ್ತವೆ ಹೀಗಾಗಿ ಕಲಿಕೆಯಲ್ಲಿ ಪ್ರಯತ್ನ ಮತ್ತು ಪ್ರಮಾದಕ್ಕೆ ಅವಕಾಶವಿರಲಿ.

# ಚಳಿಗಾಲದ ವಲಸೆಗಾರ ಕಂದು ಬಾತುಕೋಳಿ



■ **ಸೋಮೇಶಪ್ಪ ಸಿ ಎನ್** ಹಿರೇಹಡಗಲಿ



ಒಂದು ಚಳಿಗಾಲದ ಭಾನುವಾರ ಬೆಳಿಗಿನ ಜಾವ ವಿಪರೀತ ಚಳಿಯಿಂದ ಹೊರಗೆ ಹೋಗಲು ಮನಸ್ಸೇ ಬಾರದು. ಆದರೆ ಪಕ್ಷಿ ಛಾಯಾಗ್ರಹಕರಿಗೆ ಚಳಿಗಾಲವೇ ಅತ್ಯಂತ ಪ್ರಶಸ್ತವಾದ ಕಾಲ. ಏಕೆಂದರೆ ಚಳಿಗಾಲ ಬಂತೆಂದರೆ ವಲಸೆ ಹಕ್ಕಿಗಳ ಕಲರವ ಶುರುವಾಗುತ್ತದೆ. ಅದರಲ್ಲಿಯೂ ಹೊಳೆಯದಂಡೆಯಲ್ಲಿ, ಬೆಳಗಿನ ಹೊತ್ತಿನಲ್ಲಿ ಹಕ್ಕಿಗಳು ಬಹಳ ಚುರುಕಾಗಿ, ಗದ್ದಲ ಎಬ್ಬಿ ಸುತ್ತ, ಹಾರುವ, ಬೇಟೆಯಾಡುವ, ಜಗಳ ವಾಡುವ, ಮರಿಗಳಿಗೆ ಆಹಾರ ಒದಗಿಸುವ, ದೃಶ್ಯವಂತು ವರ್ಣಿಸ ಲಸದಳ. ಅದೊಂದು ದೃಶ್ಯ ಕಾವ್ಯ.

ಅಲ್ಲೀಪುರ ಡ್ಯಾಂನ ಮುಂಭಾಗದಲ್ಲಿ ಕಪ್ಪತ್ತಗಿರಿ ಶ್ರೇಣಿ, ಕಪ್ಪತ್ತಗುಡ್ಡಕ್ಕೆ ಮುತ್ತಿಡುವ ಮೋಡಗಳ ಸಾಲು. ಅದರ ತಪ್ಪಲಿನಲ್ಲಿ ಹರಿಯುವ ತುಂಗಭದ್ರೆಯ ಜುಳುಜುಳು ನಾದ. ಡ್ಯಾಂ ಕೆಳಗಿಳಿದು ನದಿಯ ದಡದಲ್ಲಿ ನಡೆಯುವಾಗ ದೂರದ ಕಲ್ಲು ಬಂಡೆಗಳ ನಡುವೆ ಕೇಸರಿ ಬಣ್ಣದ ಕಂದು ಬಾತುಕೋಳಿಗಳು ನೀರಿನಲ್ಲಿ ವಿಹರಿಸುವುದನ್ನು ನೋಡಿ ಆನಂದವಾಯ್ತು. ಏಕೆಂದರೆ ಅವುಗಳನ್ನು ನೋಡಿದ್ದು ಇದೇ ಮೊದಲಬಾರಿ.



ಕಂದು ಬಾತುಕೋಳಿಗಳು ಒಂದು ವಲಸೆ ಹಕ್ಕಿ ಜಾತಿಯಾಗಿದ್ದು, ಮಧ್ಯ ಏಷ್ಯಾ ಮತ್ತು ಯುರೋಪಿನ ಕೆಲವು ಭಾಗಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಮತ್ತು ಹಿಮಾಲಯ ಪ್ರದೇಶ ಸೇರಿದಂತೆ ದಕ್ಷಿಣ ಏಷ್ಯಾದಲ್ಲಿ ಚಳಿಗಾಲದ ತಿಂಗಳುಗಳನ್ನು ಕಳೆಯುತ್ತದೆ. ಸಾಮಾನ್ಯವಾಗಿ ಅಕ್ಟೋಬರ್ ಮತ್ತು ನವೆಂಬರ್ ನಡುವೆ ಅಲ್ಲೀಪುರ ಡ್ಯಾಂ ಪ್ರದೇಶಕ್ಕೆ ಆಗಮಿಸುತ್ತದೆ ಮತ್ತು ಮಾರ್ಚ್ ಅಥವಾ ಏಪ್ರಿಲ್ ವೇಳೆಗೆ ಹೊರಡುತ್ತದೆ

ಕಂದು ಬಾತುಕೋಳಿಗಳು (Ruddy Shelduck) ಹಿಮಾಲಯ ಪರ್ವತ ಶ್ರೇಣಿಯ ಮೇಲಿನಿಂದ ಅವುಗಳನ್ನು ದಾಟಿ ಭಾರತಕ್ಕೆ ಬರುತ್ತವೆ. ಹಿಮಾಲಯ ಪರ್ವತಗಳ ಮೇಲೆ ಆಮ್ಲಜನಕ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಆದರೂ ಈ ಹಕ್ಕಿಗಳು ಆಮ್ಲಜನಕ ಕಡಿಮೆ ಇರುವ ಹಿಮಾಲಯ ಹೇಗೆ ದಾಟುತ್ತವೆ ಎನ್ನುವುದೇ ಸೋಜಿಗ.!

ಮಂಗೋಲಿಯಾ, ಟಿಬೆಟ್ ಮತ್ತು ರಷ್ಯಾದ ಕೆಲವು ಭಾಗಗಳನ್ನು ಒಳಗೊಂಡಂತೆ ಮಧ್ಯ ಏಷ್ಯಾದ ಎತ್ತರದ ಪ್ರದೇಶಗಳಲ್ಲಿ ಈ ಬಾತುಕೋಳಿ ಗಳು ಸಂತಾನೋತ್ಪತ್ತಿ ಮಾಡುತ್ತವೆ. ಸಂತಾನೋತ್ಪತ್ತಿ ಅವಧಿಯಲ್ಲಿ, ಇವುಗಳು ಸರೋವರಗಳು ಮತ್ತು ನದಿಗಳ ಬಳಿ ಜೌಗು ಪ್ರದೇಶಗಳು ಮತ್ತು ಜವುಗು ಪ್ರದೇಶಗಳಲ್ಲಿ ವಾಸಿಸುತ್ತವೆ. ಚಳಿಗಾಲದ ತಿಂಗಳುಗಳಲ್ಲಿ, ರಡ್ಡಿ ಶೆಲ್ಡಕ್ಸ್ ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದ ಭಾಗಗಳನ್ನು ಒಳಗೊಂಡಂತೆ ದಕ್ಷಿಣ ಏಷ್ಯಾದ ಬೆಚ್ಚಗಿನ ಪ್ರದೇಶಗಳಿಗೆ ವಲಸೆ ಬರುತ್ತವೆ.

ರಡ್ಡಿ ಶೆಲ್ಡಕ್ಸ್ ಅನ್ನು ಇಂಟರ್ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ (IUCN) ಸಂಸ್ಥೆಯವರು ಈ ಹಕ್ಕಿಗಳನ್ನು ಅಳಿವಿನ ಅಂಚಿನಲ್ಲಿರುವ ಹಕ್ಕಿ ಗಳೆಂದು ಘೋಷಿಸಿರುತ್ತದೆ., ಆದರೆ ಅವು ಆವಾಸಸ್ಥಾನದ ನಷ್ಟ, ಬೇಟೆ ಮತ್ತು ಮಾಲಿನ್ಯದಿಂದ ಬೆದರಿಕೆಯನ್ನು ಎದುರಿಸುತ್ತವೆ. ನೀವೇನಾದರೂ ಚಳಿಗಾಲದ ತಿಂಗಳುಗಳಲ್ಲಿ ಅಲ್ಲೀಪುರ ಡ್ಯಾಂ ಗೆ ಭೇಟಿ ಕೊಟ್ಟಾಗ ಇವುಗಳನ್ನು ನೋಡಿ ಗುರುತಿಸಲು ಮರೆಯಬೇಡಿ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

### बाल - शक्ति

**I . अनुरूपता :**

1) टोली का नाम : बाल- शक्ति : टोली का मुखिया : ------- ( **मोहन** )

2) कर्नाटक संपदा : निबंध :: बाल-शक्ति : ------ ( **लघु नाटिका** )

3) दुनिया में पहला मकान : डाँ विजय गुप्ता :: बाल-शक्ति : ----- ( **जगतराम आर्य** )

**II . एक वाक्य में उत्तर लिखिए |**

3) हमें किस उम्र में अच्छी आदते डालनी है ?

**उत्तर :** हमें **12 वर्ष** की उम्र में अच्छी आदते डालनी है |

4) बच्चों की तारीफ किसने की ?

**उत्तर :** बच्चों की तारीफ **कलेक्टर साहब** ने की

5) टोली का मुखिया कौन बना ?

**उत्तर :** टोली का मुखिया **मोहन ने** बना |

6) रामू ने किस विषय का गृह - कार्य नही किया था ?

**उत्तर :** रामू ने **गणित** विषय का गृह कार्य नही किया था |

**III. तीन - चार वाक्यो में उत्तर लिखिए :**

6) गाँव की सफाई के लिए बालक क्या काम करते हैं ? ( 2018 ,April -2024 )

**उत्तर :** * स्कूल के परिसर को स्वच्छ किए |
* गाँव की गंदगी को दूर करने के लिए वे रोज एक घंटा गाँव की सफाई में लग गए |
* गाँव के अनेक गड्ढों को मिट्टी से भरें |
* गाँव का कूडा एक निश्चित जगह में डालने के लिए लोगों को बताये |
* गाँव को हरा - भरा रखने के लिए चारो तरफ पेड- पौधे लगायें |
* घर के आँगन में फलदार पेड लगायें |

7) गाँव को आदर्श गाँव कैसे बनाया जा सकता है ? ( April -2019 )

**उत्तर :**
* गाँव की गंदगी को दूर करने के लिए रोज एक घंटा गाँव की सफाई में लगना चाहिए |
* गाँव को हरा - भरा रखने के लिए चारो तरफ पेड- पौधे लगना चाहिए |
* गाँव का कूडा एक निश्चित जगह में डालने के लिए लोगो को बताना चाहिए |
* गाँव के लोगों को सफाई के बारेमें जानकारी देना चाहिए |

8) कलेक्टर साहब ने बच्चों की बडाई ( तारीफा) कैसे की ? ( April -2020 )

**उत्तर :** कलेक्टर साहब ने बच्चों की बडाई इस प्रकार की कि - इस गाँव को साफ-सुथरा देखकर मुझे हार्दिक प्रसन्नता हुई है | इन बच्चों ने मिलकर गाँव को एक नया जीवन प्रदान किया गया है | इन बच्चों जितनी बडाई की जाए उतनी ही थोडी है | इन सबने मिलकर गाँव को स्वच्छ वातावरण दिया है | बाल-शक्ति के कारण आपका गाँव एक आदर्श गाँव बन गया है |

9) पाँच हजार रूपये मिलने पर मोहन ने क्या सोचता है ?

**उत्तर :**पाँच हजार रूपये मिलने पर मोहन ने इस तरह सोचता है कि - ये रूपये हम प्रदानाध्यापक जी को दे देंगे | स्कूल के पुस्तकालय में गरीब बच्चों के लिए हम पुस्तकों का प्रबंध करेंगे |

-----------------------------------------------

**विलोम शब्द**

| | |
|---|---|
| रात X दिन | अपना X पराया |
| आदि X अंत | आयात X निर्यात |
| आय X व्यय | उतार X चढाव |
| तोड X जोड | तारीफ X निंदा |

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

# ಎಲ್ಲೆಡೆ ಮನಮೋಹನ್‌ಗೆ ಭಾವುಕ ನಮನ




**ಮೊದಲ ಪುಟದಿಂದ**

ಹತ್ತು ವರ್ಷಗಳ ಕಾಲ ಪ್ರಧಾನಿ ಮಂತ್ರಿಯಾಗಿ ದೇಶದ ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಮನಮೋಹನ್ ಸಿಂಗ್ ಅವರು ದೇಶವನ್ನು ಆರ್ಥಿಕವಾಗಿ, ಸಾಮಾಜಿಕ ವಾಗಿ ಅಭಿವೃದ್ಧಿಗೊಳಿಸಿದರು. ದೇಶ ಕಂಡ ಪ್ರಾಮಾಣಿಕ ಪ್ರಧಾನಮಂತ್ರಿಗಳಲ್ಲಿ ಒಬ್ಬರು. ರಾಜಕಾರಣ ದಲ್ಲಿ ಪ್ರಾಮಾಣಿಕತೆ ಕಾಣಸಿಗುವುದು ವಿರಳ. ಆದರೆ ತಮ್ಮ ಅಧಿಕಾರವಧಿಯಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿ, ದೇಶದ ಆರ್ಥಿಕತೆಯಲ್ಲಿ ತಮ್ಮ ಹೆಜ್ಜೆಗುರುತನ್ನು ಬಿಟ್ಟು ಹೋಗಿದ್ದಾರೆ ಎಂದರು.

### ನಿಧನದಿಂದ ದೇಶಕ್ಕೆ ದೊಡ್ಡ ನಷ್ಟ

ಅವರ ಬದುಕು , ಆರ್ಥಿಕ ನೀತಿಗಳು ನಮ್ಮೆಗೆಲ್ಲ ಪ್ರೇರಣೆ ಹಾಗೂ ಸ್ಫೂರ್ತಿ ನೀಡುತ್ತಿದೆ. ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದರೂ ಅತ್ಯಂತ ಸರಳ, ವಿನಯವಂತರಾಗಿದ್ದ ಶ್ರೀಯುತರು ದೇಶದ ಗೌರವಯುತ ವ್ಯಕ್ತಿಯಾಗಿದ್ದರು. ಇಂದು ಅವರು ನಮ್ಮನ್ನು ಅಗಲಿದ್ದು, ಭಾರತಕ್ಕೆ ಆದ ದೊಡ್ಡ ನಷ್ಟ. ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗದವರಿಗೆ, ಅಭಿಮಾನಿ ಬಳಗ ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದರು.

### ಆಹಾರ ಭದ್ರತೆ ಕಾಯ್ದೆಯಡಿ ಅನ್ನಭಾಗ್ಯ ಯೋಜನೆ

ಮನಮೋಹನ್ ಸಿಂಗ್ ದೇಶದಲ್ಲಿ ಮೊದಲ ಬಾರಿಗೆ ಆಹಾರ ಭದ್ರತೆ ಕಾಯ್ದೆಯನ್ನು ಜಾರಿಗೆ ತಂದವರು. ದೇಶದ ಬಡತನವಿದ್ದಿದ್ದರಿಂದ, ಕಡಿಮೆ ದರದಲ್ಲಿ ಆಹಾರ ಲಭಿಸುವಂತಾಗ ಬೇಕೆಂಬ ಸದುದ್ದೇಶದಿಂದ ಈ ಕಾನೂನನ್ನು ಜಾರಿಗೆ ತರಲಾಯಿತು. ನಂತರ ನಾನು



ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಿಪಿಎಲ್ ಕಾರ್ಡ್ದಾರರಿಗೆ ಅನ್ನಭಾಗ್ಯ ಯೋಜನೆಯಡಿ ಒಂದು ರೂ. ದರದಲ್ಲಿ ಒಂದು ಕೆಜಿ ಅಕ್ಕಿ ನೀಡುವ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಯಿತು. ನಂತರದ ದಿನಗಳಲ್ಲಿ ಐದು ಕೆಜಿ ಯಿಂದ ಏಳು ಕೆಜಿಯವರೆಗೆ ಹೆಚ್ಚಿಸಿ ಅಕ್ಕಿಯನ್ನು ಉಚಿತವಾಗಿ ನೀಡಲಾಗುತ್ತಿತ್ತು. ಇಂದು ನರೇಂದ್ರ ಮೋದಿಯವರು ನೀಡುತ್ತಿರುವ ಐದು ಕೆಜಿ ಆಹಾರಧಾನ್ಯ ಹಂಚಿಕೆಯ ಯೋಜನೆ ಪ್ರಾರಂಭವಾದದ್ದು ಮನಮೋಹನ್ ಸಿಂಗ್ ಅವರ ದೂರದೃಷ್ಟಿಯಿಂದ. ದೇಶದ ಬಡವರು, ನಿರುದ್ಯೋಗಿಗಳ ಕಷ್ಟನಿವಾರಣೆಗೆ ಪೂರಕ ಯೋಜನೆಗಳನ್ನು ಜಾರಿಗೊಳಿಸಿದ್ದರು ಎಂದರು.

### ಕರ್ನಾಟಕದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ಪ್ರಶಂಸೆ

ಮನಮೋಹನ್ ಸಿಂಗ್ ರವರೊಂದಿಗಿನ ಮುಖ್ಯಮಂತ್ರಿಗಳ ಒಡನಾಟದ ಬಗ್ಗೆ ಪ್ರತಿಕ್ರಿಯೆ ನೀಡಿ, ಅವರು ಪ್ರಧಾನಿಯಾಗಿದ್ದಾಗ ಭೇಟಿ ಮಾಡಿದ್ದೂ, ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕರ್ನಾಟಕದಲ್ಲಿ ನಡೆದ ಕಾರ್ಯಕ್ರಮವೊಂದಕ್ಕೆ ಆಗಮಿಸಿ, ರಾಜ್ಯದ ಆರ್ಥಿಕತೆಯ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಿದ್ದರು ಎಂದರು.

## ಶ್ರದ್ಧಾಂಜಲಿ ನುಡಿನಮನ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಭಾರತಕ್ಕೆ ಜಾಗತೀಕರಣವನ್ನು ಪರಿಚಯಿಸಿದ ಕೀರ್ತಿ ದಿವಂಗತ ಡಾ. ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ. ಗುರುಸಿದ್ದನ ಗೌಡ ಹೇಳಿದರು. ಪಟ್ಟಣದ ಮದಕರಿ ವೃತ್ತದಲ್ಲಿ ಶುಕ್ರವಾರ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ನಿಧನದ ಹಿನ್ನೆಲೆಯಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಏರ್ಪಡಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಿಕ್ಷಣದ ಹಕ್ಕು, ಮಾಹಿತಿ ಹಕ್ಕು, ಆಹಾರ ಭದ್ರತಾ ಕಾಯಿದೆ, ಭೂ ಸ್ವಾಧೀನ ಕಾಯಿದೆ, ಅರಣ್ಯ ಹಕ್ಕು ಕಾಯಿದೆ ಮತ್ತು ನರೇಗಾ (MNREGA) ದಂತಹ ಐತಿಹಾಸಿಕ ಸುಧಾರಣೆಗಳಿಗಾಗಿ ಎಂದೆಂದಿಗೂ ದೇಶದ ಜನರ ಮನದಲ್ಲಿ ಅವರು ಇರುತ್ತಾರೆ ಎಂದು ತಿಳಿಸಿದರು. ದೇಶದ ಆರ್ಥಿಕ ಸುಧಾರಣೆಗಳ ದಿಟ್ಟ ಹೆಜ್ಜೆ ಕೈಗೊಂಡು, ಆಧುನಿಕ ಭಾರತದ ಆರ್ಥಿಕತೆಯ ರೂವಾರಿ ಎನಿಸಿದ್ದ ಸಿಂಗ್ ಅವರು ಹಣಕಾಸು ಸಚಿವರಾಗಿ ಅಧಿಕಾರ ಸ್ವೀಕರಿಸಿದಾಗ ಭಾರತದ ಆರ್ಥಿಕತೆ ಸಂಪೂರ್ಣ ಹದಗೆಟ್ಟಿತ್ತು. ಮುಕ್ತ ಮಾರುಕಟ್ಟೆಯೊಂದೇ ದೇಶದ ಮುಂದಿರುವ ಮಾರ್ಗ ಎಂದು ಬಲವಾಗಿ ನಂಬಿದ್ದ ಅವರು ಅದಕ್ಕೆ ಅನುಗುಣವಾಗಿ ಕಾರ್ಯ ಪ್ರವೃತ್ತರಾದರು. 1994–95ರ ಬಜೆಟ್‌ನಲ್ಲಿ ಭಾರೀ ಬದಲಾವಣೆಗೆ ಕೈ ಹಾಕಿದರು. ಭಾರತ ಇಂದು ವಿಶ್ವದ 5ನೇ ದೊಡ್ಡ ಆರ್ಥಿಕತೆ ಹೊಂದಿದ ಆಗಿದೆ ಎನ್ನುವುದಾದರೆ, ಅದಕ್ಕೆ ಸಿಂಗ್ ಹಾಕಿದ ಅಡಿಪಾಯವನ್ನು ಯಾರೂ ಮರೆಯುವಂತಿಲ್ಲ ಎಂದು ಹೇಳಿದರು. ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಮಾತನಾಡಿ, ಸ್ವತಂತ್ರ ಭಾರತದ ಆರ್ಥಿಕ ಇತಿಹಾಸದಲ್ಲಿ ಒಂದು ಮಹತ್ವದ ತಿರುವು ಮೂಡಿಸಿದವರು ಡಾ.ಮನಮೋಹನ್ ಸಿಂಗ್. 1991ರಿಂದ 1996ರವರೆಗೆ ಡಾ. ಸಿಂಗ್ ಅವರು ಭಾರತದ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅವರು ಆಗ ಮಾಡಿದ ಆರ್ಥಿಕ ಸುಧಾರಣೆಗಳಿಗೆ ಈಗಲೂ ವಿಶ್ವದ ಮನ್ನಣೆ ಇದೆ ಎಂದು ಸ್ಮರಿಸಿದರು. ಕೆಪಿಸಿಸಿ ಕಾರ್ಯದರ್ಶಿ ಹಿರೇಕುಂಬಳಗುಂಟೆ




ಉಮೇಶ್, ಮುಖಂಡರಾದ ನಾಗಮಣಿ ಜಿಂಕಾಲ್, ಉದಯ ಜನ್ನು, ಹಡಗಲಿ ವೀರಭದ್ರಪ್ಪ, ಮಾದೇಹಳ್ಳಿ ನಜೀರ್, ಜಿಲಾನ್, ಸಯ್ಯದ್ ಶುಕೂರ್, ಘಾಣಿ ರಾಘವೇಂದ್ರ, ಮ್ಯಾಕೆ ಚಂದ್ರಪ್ಪ, ಸಿ.ಬಿ.ಸಿದ್ದೇಶ್, ಶಫಿ ಇಂಜಿನಿಯರ್, ಬಸವರಾಜ, ಬಿ.ಕೆ.ರಾಘವೇಂದ್ರ, ಸುನೀಲ್ ಗೌಡ, ಡಿ.ಎಚ್.ದುರುಗೇಶ್, ನಲ್ಲಮುತ್ತಿ ದುರುಗೇಶ್, ಮರುಳಸಿದ್ದಪ್ಪ, ವೆಂಕಟೇಶ, ಸಣ್ಣ ತಿಮ್ಮಣ್ಣ, ದಿನಕರ ಸೇರಿದಂತೆ ಅನೇಕರು ಇದ್ದರು.

# ಗುಂಡಿ ಮುಚ್ಚಿ ಪ್ರಾಣ ಉಳಿಸಿ

## ರಸ್ತೆ ಅಗೆದು, ಗುಂಡಿ ಮುಚ್ಚಲು ಮರೆತರೇ । ಸವಾರರಿಗೆ ಹೆಚ್ಚಿದ ಮೈ ಕೈ ನೋವು



■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ಪಟ್ಟಣದ ರಾಜೀವ್ ನಗರ ಮಾರ್ಗದ ರಸ್ತೆಯಲ್ಲಿನ ಪೈಪ್ ಲೈನ್‌ನಗಾಗಿ ತೋಡಿದ ತಗ್ಗು ಆಳ ಹೆಚ್ಚಿದ್ದು ನಿತ್ಯ ಓಡಾಡುವ ವಾಹನ ಸವಾರರಿಗೆ ಮೈ ಕೈ ಬಾಧೆ ತಂದಿದೆ. ವಾಹನ ಸವಾರರ ಜೀವಕ್ಕೆ ಕುತ್ತಾಗಿರುವ ಗುಂಡಿಯನ್ನು ಶೀಘ್ರ ಮುಚ್ಚಲು ಸಂಬಂಧ ಪಟ್ಟ ಅಧಿಕಾರಿಗಳು ಕ್ರಮವಹಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದರು.

ರಾಜೀವ್ ನಗರ ನಿವಾಸಿ ವಂಸಂತ ಕುಮಾರ್, ಮಂಜುನಾಥ ಸೇರಿದಂತೆ ಇತರರು ಪತ್ರಿಕೆಯೊಂದಿಗೆ ಮಾತನಾಡಿ ಚಿರಿಬಿ ರಸ್ತೆಯಿಂದ ರಾಜೀವ್ ನಗರದ ಕೊನೆ ಕ್ರಾಸ್ ವರೆಗೆ ಅಲ್ಲಲ್ಲಿ ಪೈಪ್ ಲೈನ್‌ಗೆಂದು ಅಗೆದ ರಸ್ತೆಯ ತಗ್ಗುಗಳನ್ನು ಅಗೆದು ಬಿಡಲಾಗಿದೆ. ವೃದ್ಧರು, ಗರ್ಭಿಣಿಯರು, ಬೈಕ್ ಆಟೋ ಹತ್ತಲು ಹಿಂದೇಟಾಕುವಂತಹ ಸ್ಥಿತಿ ನಿರ್ಮಾಣವಾಗಿದೆ.

24/7 ಕುಡಿಯುವ ನೀರಿನ ಯೋಜನೆಗೆ ಅಗೆದಂತ ಫೈಫ್ ಲೈನ್ ಗುಂಡಿಗಳು, ಕೇವಲ ರಾಜೀವ್ ನಗರಕ್ಕೆ ಮಾತ್ರ ಸೀಮಿತವಲ್ಲ, ವಿದ್ಯಾ ನಗರದಿಂದ ಜೆಪಿ ನಗರ ಸಂಪರ್ಕಿಸುವ ರಸ್ತೆ ಸೇರಿದಂತೆ ಪಟ್ಟಣದ ಬಹುತೇಕ ರಸ್ತೆಗಳು ವಾಹನ ಸವಾರರ ಓಡಾಡಕ್ಕೆ ಕಂಠಕವಾಗಿವೆ ಎಂದರು.

ಪಟ್ಟಣದ ಎಲ್ಲಾ ಬಡಾವಣೆಗಳ ಮುಖ್ಯ ರಸ್ತೆಗಳಲ್ಲಿ ಫೈಫ್ ಲೈನ್ ತಗ್ಗುಗಳು ರಸ್ತೆಯುದ್ದಕ್ಕಿದ್ದರು ಈ ಬಗ್ಗೆ ಯಾವ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಎಚ್ಚೆತ್ತುಕೊಳ್ಳದಿರುವುದು ಅವರ ನಿರ್ಲಕ್ಷ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ರಸ್ತೆಯಲ್ಲಿನ ಫೈಫ್ ಲೈನ್ ಗುಂಡಿಗಳು ವಾಹನ ಸವಾರರಿಗೆ ನಿತ್ಯ ಓಡಾಟಕ್ಕೆ ಕಿರಿಕಿರಿಯಾಗಿ, ಮೈ,ಕೈ ಬಾದೆಗೆ ತುತ್ತಾಗಿ ಆಸ್ಪತ್ರೆಗೆ ಸೇರುವಂತಹ ಸ್ಥಿತಿ ನಿರ್ಮಿಸಿವೆ. ಶೀಘ್ರ ಸಂಬಂಧ ಪಟ್ಟವರು ಇವುಗಳನ್ನು ಮುಚ್ಚುವಂತೆ ಒತ್ತಾಯಿಸಿದರು.

> ಪಟ್ಟಣದ ರೇಣುಕಾ ಬಡಾವಣೆಯ ರಸ್ತೆಗಳಲ್ಲಿ ಕೈಗೊಂಡಿರುವ ಪುಟ್‌ಪಾತ್ ಕಾಮಗಾರಿ ಆಮೆಗತಿಯಲ್ಲಿದ್ದು, ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ. ವಾಲನ ಸಂಚಾರದಿಂದ ಕಲ್ಲುಗಳ ತಾಗುವ ಭೀತಿಯಿಂದಾಗಿ ಮಕ್ಕಳನ್ನು ಮನೆಯಿಂದ ಹೊರಬಿಡದಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು' ಶೀಘ್ರ ಕಾಮಗಾರಿ ಪೂರ್ಣಗೊಳಿಸಿದರೆ ಜನರಿಗೆ ಅನುಕೂಲವಾಗಲಿದೆ.
>
> – ಕುಮಾರಸ್ವಾಮಿ, ಹಿರಿಯ ನಾಗರಿಕರು. ಕೊಟ್ಟೂರು.

# ಶಿಬಿರಾರ್ಥಿಗಳಿಂದ ಶ್ರಮದಾನ




ಹೊಸಪೇಟೆ ವಿಜಯನಗರ ಪ.ಪೂ.ಮಹಾವಿದ್ಯಾಲಯ ಎನ್‌ಎಸ್‌ಎಸ್ ಶಿಬಿರದ ಶಿಬಿರಾರ್ಥಿಗಳು ಶುಕ್ರವಾರ ಮಾಜಿ ಪ್ರಧಾನಿ ಡಾ.ಮನಮೋಹನ್‌ಸಿಂಗ್ ನಿಧನದ ಹಿನ್ನೆಲೆಯಲ್ಲಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿ, ನಂತರ ಹಂಪಿಯಲ್ಲಿ ವಿವಿಧೆಡೆ ತ್ಯಾಜ್ಯ ತೆರವುಗೊಳಿಸಿ ಪರಿಸರ ಸ್ವಚ್ಛತೆ ಅರಿವು ಮೂಡಿಸಿದರು. ಶಿಬಿರದ ಯೋಜನಾಧಿಕಾರಿ ಕೆ.ಶರಣಬಸವ ಹಸಮಕಲ್ ಇದ್ದರು.



ಹೊಸಪೇಟೆಯ ನೆಹರೂ ಕಾಲೋನಿಯ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಬಳಿ ಸಮಾಜದ ಮುಖಂಡರು, ಕನ್ನಡಪರ ಸಂಘಟನೆಗಳು, ಸ್ಕೌಟ್ ಅಂಡ್ ಗೈಡ್ಸ್ ಹಾಗೂ ಶಾಲಾ ವಿದ್ಯಾರ್ಥಿಗಳು ಅಗಲಿದ ಚೇತನ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಶುಕ್ರವಾರ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು.

**ಭಾವಪೂರ್ಣ ಶ್ರದ್ಧಾಂಜಲಿ**
**ನಿಧನ - ಪುಣ್ಯ ಸ್ಮರಣೆ**
**ಜಾಹೀರಾತುಗಳಿಗೆ ವಿಶೇಷ ರಿಯಾಯತಿ**
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
**ಜಾಹೀರಾತು ನೀಡಲು ಸಂಪರ್ಕಿಸಿ**
**ಹಂಪಿ ಟೈಮ್ಸ್**
**94486 33038**



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 27–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.43 ಅಡಿ |
| ಒಳ ಹರಿವು | 108 ಕ್ಯುಸೆಕ್ |
| ಹೊರ ಹರಿವು | 8549 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 84.726 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1589.41 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.548 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**28–12–2024 – ಶನಿವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ಶೂಲ |
| ಕರಣ | : ಗರಜ |
| ಸೂರ್ಯೋದಯ | : 07:08:14 |
| ಸೂರ್ಯಾಸ್ತ | : 17:49:13 |
| ರಾಹು ಕಾಲ | : 09:48–11:09 |
| ಯಮಘಂಡ ಕಾಲ | : 13:49–15:09 |
| ಗುಳಿಕ ಕಾಲ | : 07:08–08:28 |

### ಹಂಪಿ ಟೈಮ್ಸ್ ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–5

**ಈ ವಾರದ (28–12–2024) ಚಿತ್ರಸ್ಪರ್ಧೆ**

ವಿಷಯ: ತಾಮ್ರದ ವಿದ್ಯುತ್ ವಿಭಜನೀಯ ಶುದ್ಧೀಕರಣ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ

ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.

10ನೇ ತರಗತಿ ವಿದ್ಯಾರ್ಥಿಗಳು ಶನಿವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶನಿವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

ವಾಟ್ಸ್‌ಪ್ ನಂ: 99726 03099

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **94486 33038**

–: ಸೂಚನೆ :–

ಮಾಜಿ ಪ್ರಧಾನಿ ಡಾ.ಮನಮೋಹನ್‌ಸಿಂಗ್ ನಿಧನ ನಿಮಿತ್ತ ಶುಕ್ರವಾರ ಶಾಲೆಗಳಿಗೆ ರಜೆ ಘೋಷಿಸಿದ್ದರಿಂದ ವಿಜ್ಞಾನ ಚಿತ್ರಸ್ಪರ್ಧೆ–5ರ ಚಿತ್ರಗಳನ್ನು ಶನಿವಾರ ಶಾಲೆಯಲ್ಲಿ ಬಿಡಿಸಿ, ಕಳಿಸಬಹುದು.

## ಇಂದು ಕೊಟ್ಟೂರಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಕೊಟ್ಟೂರು**



ಪಟ್ಟಣದ 66/11ಕೆವಿ ಮುಸ್ಸ್ ವಿದ್ಯುತ್ ಉಪ–ಕೇಂದ್ರದಲ್ಲಿ 3ನೇ ತ್ರೈಮಾಸಿಕ ನಿರ್ವಾಹಣ ಕಾಮಗಾರಿ ಇರುವ ನಿಮಿತ್ತ ಈ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜು ಆಗುವ ಕೊಟ್ಟೂರು ಮತ್ತು ಸಂಬಂಧ ಪಟ್ಟ ಗ್ರಾಮಗಳಿಗೆ ಶನಿವಾರ ಬೆಳಿಗ್ಗೆ ,9 ರಿಂದ ಸಂಜೆ 6 ರ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಸಹಕರಿಸಬೇಕೆಂದು ಇಲ್ಲಿನ ಜೆಸ್ಕಾಂ ಎಇಇ ಆರ್.ನಾಗರಾಜ್ ತಿಳಿಸಿದ್ದಾರೆ.

**ಹಂಪಿ ಟೈಮ್ಸ್** ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join with Us